Restoration of Sonnamaranahalli Tank in Tubegere Hobli, Doddaballapur Taluk.

*Q.—1054. Sri G. RAME GOWDA (Doddaballapur).—

Will the Government be pleased to state :—

(*a*) when the Sonnamaranahalli Tank, Tubagere Hobli, Doddaballapur Taluk was breached ;

(*b*) when the restoration work was entrusted to the contractor for the first time and the quantum of work executed by him ;

(*c*) when the tender was called far, for the second time and what is the estimated cost ;

(*d*) the reasons for the delay to take up this work ?

A.—Sri ALUR HANUMANTHAPPA (Deputy Minister for Minor Irrigation).—

(*a*) The tank is not a registered one and also not found in the list of either breached or abandoned tank. As such when breach occurred is not readily available. However on local enquiry it is ascertained that the Tank breached more than 100 years back.

(*b*) Work has not so for been entrusted to any contractor and hence the question of quantum of work executed does not arise.

(*c*) Tenders were called for the second time on 25th March 1963 and estimated cost is Rs. 45,000.

(*d*) The project papers were under finalisation.

ಶ್ರೀ ಜಿ. ರಾಮೇಗೌಡ.—ಎರಡು ಬಾರಿ ಟೆಂಡರನ್ನು ಕರೆದಿದ್ದೀರಿ, ಒಂದು ಬಾರಿ 25-3-63 ರಲ್ಲಿ ಕರೆದಿದ್ದೀರಿ. ಮೊದಲನೇ ಬಾರಿ ಯಾವ ತಾರೀಖಿನಲ್ಲಿ ಕರೆದಿದ್ದೀರಿ ?

† ಶ್ರೀ ಅಲೂರು ಹನುಮಂತಪ್ಪ.—15-12-59 ರಲ್ಲಿ

ಶ್ರೀ ಜಿ. ರಾಮೇಗೌಡ.—ಆ ತಾರೀಖಿನಿಂದ 25-3-63 ರ ವರೆಗೂ ಕೆಲಸ ವಹಿಸದೇ ಇರುವುದಕ್ಕೆ ಕಾರಣವೇನು ?

ಶ್ರೀ ಅಲೂರು ಹನುಮಂತಪ್ಪ.—ಕೆಲವು ಟೆಕ್ನಿಕಲ್ ಅಬ್ಸರ್ವೇಷನ್‌ಗಳನ್ನು ಸಾರ್ವ್ ಮಾಡಬೇಕಾಗಿತ್ತು ಅದಕ್ಕೆ ಅಂದಾಜನ್ನು ಮಂಜೂರು ಮಾಡುವುದಕ್ಕೆ ಆಗಲಿಲ್ಲ.

ಶ್ರೀ ಜಿ ರಾಮೇಗೌಡ.—ಈ ಕೆರೆಯ ಹಿಂದುಗಡೆ ಇರತಕ್ಕ ಅಚ್ಚುಕಟ್ಟುದಾರರಿಂದ ನೂರು ವರ್ಷಗಳಿಂದಲೂ ತರೀ ಕಂದಾಯ ವಸೂಲು ಮಾಡುತ್ತಾ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಅಲೂರು ಹನುಮಂತಪ್ಪ.—ಅದು ಒಡೆದುಹೋಗಿ ನೂರುವರ್ಷ ಆಗಿದೆ ಎಂದು ವರದಿಯಾಗಿದೆ. ಯಾವ ತಾರೀಖಿನಿಂದ, ಯಾವ ವರ್ಷದಿಂದ ಆ ರೀತಿ ವಸೂಲು ಮಾಡುತ್ತಾ ಇದ್ದಾರೆ ಎಂಬ ವಿವರ ನಮ್ಮಕ್ಕೆ ನನ್ನ ಹತ್ತಿರ ಇಲ್ಲ.

ಶ್ರೀ ಜಿ. ರಾಮೇಗೌಡ.—ಈಗ ಟೆಕ್ನಿಕಲ್ ಒಪಿನಿಯನ್ ಮೇಲೆ ಟೆಂಡರ್ ಕಾಂಟ್ರ್ಯಾಕ್ಟ್ ಕೊಟ್ಟು ಕೆಲಸ ಪ್ರಾರಂಭ ಮಾಡಲು ಏನಾದರೂ ಸಲಹೆ ಕೊಟ್ಟಿದ್ದೀರಾ ?

ಶ್ರೀ ಅಲೂರು ಹನುಮಂತಪ್ಪ.—ಈಗಾಗಲೇ ವರ್ಕ್ ಆರ್ಡರ್ ಇಷ್ಯೂ ಮಾಡಿದೆ.